Pic Courtesy : www.wikipedia.org



# ಹರಿಪಾದವಿರಲಿಕೆ ಪರದೈವಂಗಳಿಗೆ ಎರಗಲೇಕೆ

ಹರಿಪಾದವಿರಲಿಕೆ ಪರದೈವಂಗಳಿಗೆ ಎರಗಲೇಕೆ
ವರಮಾಣಿಕವಿದ್ದು ಎರವಿನ ಒಡವೆಯ ಬಯಸಲೇಕೆ

ಪೆತ್ತ ಪಿತನ ಮಾತು ಕಿವಿಯಲಿ ಕೇಳದ ಪುತ್ರನೇಕೆ
ಚಿತ್ತಪಲ್ಲಟವಾಗಿ ತಿರುಗುವ ಸತಿಯಳ ಸಂಗವೇಕೆ
ಉತ್ತಮ ಗುರುವನು ನಿಂದನೆ ಮಾಡುವ ಶಿಷ್ಯನೇಕೆ
ಶಕ್ತಿಹೀನನಾಗಿ ಸರ್ವಜನರ ಕೂಡೆ ಕ್ರೋಧವೇಕೆ

ಭಾಷೆಯ ಕೊಟ್ಟು ತಪ್ಪುವ ಪ್ರಭುವಿನೊಳಾಸೆಯೇಕೆ
ಕಾಸಿಗೆ ಕಷ್ಟಪಡುವ ಲೋಭಿಯ ಗೆಳೆತನವೇಕೆ
ವೇಶ್ಯೆಯ ನೆಚ್ಚಿ ತನ್ನ ನಾರಿಯ ಬಿಡುವಂಥ ಪುರುಷನೇಕೆ
ಹಾಸಿಗೆರಿಯತು ಕಾಲ ನೀಡಲರಿಯದ ಮನುಜನೇಕೆ

ಚೆನ್ನಾಗಿ ಬಾಳ್ದು ಪುಣ್ಯವ ಮಾಡದ ಮನುಜನೇಕೆ
ಸನ್ನುತ ವಿದ್ಯೆಯ ಮೆಚ್ಚರಲಿಯದ ಅರಸನೇಕೆ
ಅನ್ನವನಿತ್ತು ಹಂಗಿಸುತಿರುವರ ಬಾಳದೇಕೆ
ಉನ್ನತ ಪುರಂದರವಿಠಲನ ನೆನೆಯದ ಜನುಮವೇಕೆ

www.eeshavasyam.com

ಶ್ರೀ ವಿದ್ಯಾಭೂಷಣರಿಗಿಂತನೂ ಛೊಲೋ ಮನುಷ್ಯಾ, ಇದ್ದಾನರ ಎಲ್ಲಿ?
ಈ ಹಾಡು ಹಾಡಾಂವ? ನೀವ ಕೇಳಿ ನೋಡ್ರಿ ಬೇಕಂದ್ರ . ಇಲ್ಲೇ ಅದ ಲಿಂಕು.

https://youtu.be/4HYSRiE4ZCY?t=25m12s